# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 161 (250) |
| 2. | ಸದಸ್ಯರ ಹೆಸರು | : | ಶ್ರೀ ಜಿ.ರಘು ಆಚಾರ್ |
| 3. | ಉತ್ತರಿಸಬೇಕಾದ ದಿನಾಂಕ | : | 16.07.2019 |
| 4. | ಉತ್ತರಿಸಬೇಕಾದ ಸಚಿವರು | : | ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ವಿಚಾರವು ಯಾವ ಹಂತದಲ್ಲಿದೆ; (ಮಾಹಿತಿ ನೀಡುವುದು) | 2013-14 ನೇ ಸಾಲಿನ ಆಯವ್ಯಯ ಘೋಷಣೆಯಲ್ಲಿ ಚಿತ್ರದುರ್ಗದಲ್ಲಿ ಹೊಸ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಆಕುಕ 172 ಎಂಪಿಎಸ್ 2014 ದಿನಾಂಕ: 12-06-2014 ರಲ್ಲಿ ಸದರಿ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ. |
| (ಆ) | ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ವಿಳಂಬ ಆಗುತ್ತಿರಲು ಕಾರಣವೇನು? (ಮಾಹಿತಿ ನೀಡುವುದು) | ಹೊಸ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಅಂದಾಜು ರೂ.610.00 ಕೋಟಿಗಳ ಅನಾವರ್ತಕ ವೆಚ್ಚ ಹಾಗೂ ವಾರ್ಷಿಕ ರೂ.60.00 ಕೋಟಿಗಳ ಆವರ್ತಕ ವೆಚ್ಚದ ಅವಶ್ಯಕತೆ ಇರುತ್ತದೆ. ಆದ್ದರಿಂದ ಅನುದಾನದ ಲಭ್ಯತೆಯನ್ನು ಆಧರಿಸಿ ಹೊಸ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ಎಂಇಡಿ 98 ಎಂಎಂಸಿ 2019**

(ಈ. ತುಕಾರಾಮ್)
ವೈದ್ಯಕೀಯ ಶಿಕ್ಷಣ ಸಚಿವರು

| | | | | |
|---|---|---|---|---|
| 4 | **TBC–ಪ್ಯಾಕೇಜ್–4 (ಚೈ.47.00 ಯಿಂದ 61.00 ಕಿ.ಮೀ)** | 17.05.2019 | ಸ್ಟಾರ್‌ಕನ್ಸಟ್ರಕ್ಷನ್ ಪ್ರೈವೇಟ್ ಲಿಮಿಟೆಡ್. | 112.23 |
| 5 | **TBC–ಪ್ಯಾಕೇಜ್–5 (ಚೈ.61.00 ಯಿಂದ 84.00 ಕಿ.ಮೀ)** | 17.05.2019 | ಸ್ಟಾರ್‌ಕನ್ಸಟ್ರಕ್ಷನ್ ಪ್ರೈವೇಟ್ ಲಿಮಿಟೆಡ್. | 202.02 |
| 6 | **TBC–ಪ್ಯಾಕೇಜ್–6 (ಚೈ.84.00 ಯಿಂದ 98.00 ಕಿ.ಮೀ)** | 08.03.2019 | ಸರಳ ಕನ್ಸಸ್ಟ್ರಕ್ಷನ್ ಪ್ರೈ.ಲಿ. | 79.67 |
| 7 | **TBC–ಪ್ಯಾಕೇಜ್–7 (ಚೈ.98.00 ಯಿಂದ 108.00 ಕಿ.ಮೀ)** | 09.05.2019 | ರೆಡ್ಡಿ ವೀರಣ್ಣ ಕನ್ಸಸ್ಟ್ರಕ್ಷನ್ | 102.24 |

5. **ತರೀಕೆರೆ ಲಿಫ್ಟ್‌ಕಾಮಗಾರಿ:** (ಅಜ್ಜಂಪುರ ಸುರಂಗದ ಆಗಮನ ಮತ್ತು ನಿರ್ಗಮನದಲ್ಲಿ ಬರುವಎರಡುಏತ ಕಾಮಗಾರಿಗಳು)

ಅಚ್ಚುಕಟ್ಟು ಪ್ರದೇಶ : 20150 ಹೆಕ್ಟರ್ಸ್
ತುಂಬಿಸುವ ಕೆರೆಗಳ ಸಂಖ್ಯೆ: 7

ಸದರಿಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಗುತ್ತಿಗೆ ವಹಿಸಿದ್ದು ವಿವರಗಳು ಈ ಕೆಳಗಿನಂತಿವೆ.

| ಕ್ರ. ಸ. | ಕಾಮಗಾರಿಯ ಹೆಸರು | ಕಾಮಗಾರಿಯನ್ನು ವಹಿಸಿದ ದಿನಾಂಕ | ಗುತ್ತಿಗೆ ವಹಿಸಲಾದ ಸಂಸ್ಥೆಯ ಹೆಸರು | ಟೆಂಡರ್ ಮೊತ್ತ ಕೋಟಿ ರೂ.ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | ತರೀಕೆರೆ ಲಿಫ್ಟ್ ಪ್ಯಾಕೇಜ್–I | **17.03.2018** | ಮೆ॥ ಜೈನ್‌ಇರಿಗೇಶನ್ ಸಿಸ್ಟಮ್ ಲಿ., | 287.667 |
| 2 | ತರೀಕೆರೆ ಲಿಫ್ಟ್ ಪ್ಯಾಕೇಜ್–2 | **15.03.2018** | ಮೆ॥ ಮೆಗಾ ಇಂಜಿನಿಯರಿಂಗ್& ನೆಟಾಫಿಮ್ (JV) | 524.365 |

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:158ಕ್ಕೆ ಅನುಬಂಧ-3

1) 2019-20ನೇ ಸಾಲಿಗೆ 5,17,000 ವರಸೆ ಡೋಸ್ ಕೆಎಫ್‌ಡಿ ಲಸಿಕೆಗಳು ಅವಶ್ಯಕತೆಯಿದ್ದು, ಇವುಗಳನ್ನು ತಯಾರಿಸಲು ಈಗಾಗಲೇ 2019-20 ನೇ ಸಾಲಿನ ಬಜೆಟ್‌ನಲ್ಲಿ ರೂ.5.00 ಕೋಟಿ ಹಣವನ್ನು ಮೀಸಲಿಡಲಾಗಿದೆ.
2) ಕೆ.ಎಫ್.ಡಿ ಭಾಧಿತ ಪ್ರದೇಶಗಳ ಅವಶ್ಯಕತೆಗೆ ಅನುಗುಣವಾಗಿ ಡಿ.ಎಂ.ಪಿ ತೈಲವನ್ನು ಖರೀದಿಸಲು ಆಯಾ ಜಿಲ್ಲಾ ಆರೋಗ್ಯ ಮತ್ತು ಕುಕ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಾಕಷ್ಟು ಪ್ರಮಾಣದ ಉಣ್ಣೆ ವಿಕರ್ಷಕ ಡಿ.ಎ.ಪಿ ತೈಲವನ್ನು ದಾಸ್ತಾನು ಇಡಲಾಗಿದೆ.
3) ಭಾಧಿತ/ಶಂಕಿತ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಣ್ಣೆ ನಾಶಕ್ಕಾಗಿ ಮೆಲಾಥಿಯಾನ್ ಪುಡಿಯನ್ನು ಕನಿಷ್ಟ 10 ಕೆಜಿ ಗೆ ಕಡಿಮೆ ಇಲ್ಲದಂತೆ ಎಲ್ಲಾ ಸಮಯದಲ್ಲೂ ದಾಸ್ತಾನು ಇಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿದೆ.
4) ಜಾನುವಾರುಗಳ ಮೈ ಮೇಲಿರುವ ವಯಸ್ಕ ಉಣ್ಣೆಗಳ ನಾಶಕ್ಕಾಗಿ Deltramethrin ಔಷಧಿಯನ್ನು ಪಶು ಸಂಗೋಪನಾ ಇಲಾಖೆಯ ಸಹಯೋಗದಿಂದ ಸಿಂಪಡಿಸಲು ಕ್ರಮ ವಹಿಸಲಾಗಿದೆ.
5) ಅಂತರ ಇಲಾಖಾ ಸಮನ್ವಯ ಸಮಿತಿಯ ಸಭೆಗಳನ್ನು ಆಯಾ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳ ಅವರ ಅಧ್ಯಕ್ಷತೆಯಲ್ಲಿ ನಡೆಸಲುಕ್ರಮ ವಹಿಸಲಾಗಿದೆ.
6) ಕೆ.ಎಫ್.ಡಿ ಲಸಿಕೆಯನ್ನು ಜುಲೈ ತಿಂಗಳಿಂದಲೇ ಆರಂಭಿಸಿ ವರ್ಷ ಪೂರ್ತಿ ನಡೆಸಲು ಕ್ರಮ ವಹಿಸಲಾಗಿದೆ.
7) ವಿವಿಧ ರೀತಿಯ ಮಾಧ್ಯಮಗಳಾದ ಕರಪತ್ರ, ಫ್ಲೆಕ್ಸ್ ಬ್ಯಾನರ್, ಬೀದಿ ನಾಟಕ, ವಿಡಿಯೋ ತುಣುಕು/ಕಿರುಚಿತ್ರಗಳ ಮುಖಾಂತರ, ಗೋಡೆ ಬರಹಗಳ ಮುಖಾಂತರ ಜನರಿಗೆ ಖಾಯಿಲೆ ಬಗ್ಗೆ ಹಾಗೂ ಅನುಸರಿಸಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಆರೋಗ್ಯ ಶಿಕ್ಷಣದ ಮೂಲಕ ಮಾಹಿತಿ ನೀಡಲು ಕ್ರಮ ವಹಿಸಲಾಗಿದೆ.
8) ಹೆಚ್ಚುವರಿ ಅವಶ್ಯಕ ಸಿಬ್ಬಂದಿಗಳಾದ ಕೀಟ ಶಾಸ್ತ್ರಜ್ಞರು, ಕೀಟ ಸಂಗ್ರಹಣಾ ಕಾರರು ಹಾಗೂ ಡಿ.ಇ.ಓ ಗಳನ್ನು ನೇಮಕ ಮಾಡಲಾಗಿದೆ.
9) ಕೆ.ಎಫ್.ಡಿ ಸಂಕಿತ ಜಿಲ್ಲೆಗಳಲ್ಲಿ ಆರೋಗ್ಯ ಇಲಾಖೆಯ ವೈದ್ಯರು ಹಾಗೂ ಸಿಬ್ಬಂದಿಯವರಿಗೆ ಪುನರ ಮನನ ತರಭೇತಿ ನೀಡಲಾಗುತ್ತಿದೆ.
10) ರೂ.5.00 ಕೋಟಿ ವೆಚ್ಚದಲ್ಲಿ ಶಿವಮೊಗ್ಗದಲ್ಲಿರುವ ಪ್ರಯೋಗಾಲಯವನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ.